# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮಂ.ವಿ./ಪ.ವಿ./ಸಿ.ಆರ್.44/2024-25/ಇ.15

ಕುಲಸಚಿವ (ಪರೀಕ್ಷಾಂಗ)ರ ಕಛೇರಿ,
ಮಂಗಳಗಂಗೋತ್ರಿ - 574 199.
ದಿನಾಂಕ: 21.05.2025

**ಪ್ರಕಟಣೆ**

ವಿಷಯ: ಜುಲೈ 2025ರಲ್ಲಿ ನಡೆಯಲಿರುವ ವಿವಿಧ ಸ್ನಾತಕೋತ್ತರ ಕಾರ್ಯಕ್ರಮಗಳ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್ ಪರೀಕ್ಷೆಗಳ ಬಗ್ಗೆ.

-------

ಮಂಗಳೂರು ವಿಶ್ವವಿದ್ಯಾನಿಲಯದ 2024-25ನೇ ಶೈಕ್ಷಣಿಕ ವರ್ಷದ ಎಂ.ಎ., ಎಂ.ಎಸ್.ಡಬ್ಲ್ಯು., ಪ್ರಥಮ/ದ್ವಿತೀಯ ವರ್ಷದ ಎಂ.ಎ. ತುಳು ಮತ್ತು ಎಂ.ಕಾಂ.,ಎಂ.ಕಾಂ.(ಹೆಚ್.ಆರ್.ಡಿ.),ಎಂ.ಕಾಂ.(ಇನ್ಶೂರೆನ್ಸ್ ಆ್ಯಂಡ್ ಬ್ಯಾಂಕ್ ಮ್ಯಾನೇಜ್‌ಮೆಂಟ್),ಎಂ.ಬಿ.ಎ.(ಐ.ಬಿ.),ಎಂ.ಬಿ.ಎ.(ಟಿ.ಟಿ.ಎಂ.) ಹಾಗೂ ಎಂ.ಎಸ್ಸಿ., ಎಂ.ಎ.ಎಸ್.ಎಲ್.ಪಿ., ಎಂ.ಪಿ.ಎಡ್., ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್ ಪರೀಕ್ಷೆಗಳು ದಿನಾಂಕ ***10.07.2025*** ರಿಂದ ಪ್ರಾರಂಭವಾಗಲಿರುವುದು ಎಂಬುದನ್ನು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ಕಾಲೇಜು ಪ್ರಾಂಶುಪಾಲರುಗಳು ಹಾಗೂ ಸದರಿ ಪರೀಕ್ಷೆಗಳಿಗೆ ಹಾಜರಾಗಲಿರುವ ಎಲ್ಲಾ ಅಭ್ಯರ್ಥಿಗಳ ಗಮನಕ್ಕೆ ಈ ಮೂಲಕ ತರಲಾಗಿದೆ.

**ಸೂಚನೆಗಳು:**

1. ಮೇಲಿನ ಸೆಮಿಸ್ಟರ್ ನಿಯಮಿತ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಿಗೆ/ಪತ್ರಿಕೆಗಳಿಗೆ ಕಡ್ಡಾಯವಾಗಿ **UUCMS Portal** ನಲ್ಲಿ ನೋಂದಣಿ ಮಾಡತಕ್ಕದ್ದು. ಹಾಗೂ ಸಂಬಂಧಿಸಿದ ಪರೀಕ್ಷಾ ಶುಲ್ಕವನ್ನು Online ನಲ್ಲಿಯೇ **UUCMS Portal** ನ ಮುಖಾಂತರ ಪಾವತಿಸತಕ್ಕದ್ದು. ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಿಗೆ/ಪತ್ರಿಕೆಗಳಿಗೆ ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು.
2. ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್ **ಪುನರಾವರ್ತಿತ** ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಈ ಕೆಳಗಿನಂತೆ ನೋಂದಾಯಿಸತಕ್ಕದ್ದು.
    - 2021-22ನೇ ಸಾಲಿಗಿಂತ ಮೊದಲು ಪ್ರವೇಶಾತಿ ಪಡೆದ (MU-Linx ಬ್ಯಾಚ್‌ನ) ವಿದ್ಯಾರ್ಥಿಗಳ ಅರ್ಜಿಯನ್ನು MU- VARSITY Portalನಲ್ಲಿ ನೋಂದಾಯಿಸಿ, ಪರೀಕ್ಷಾ ಶುಲ್ಕವನ್ನು ಬ್ಯಾಂಕ್ ಚಲನ್ ಮೂಲಕ ಪಾವತಿಸತಕ್ಕದ್ದು.
    - 2021-22 ಹಾಗೂ ನಂತರ ಪ್ರವೇಶಾತಿ ಪಡೆದ **(UUCMS** ಬ್ಯಾಚ್‌ನ) ವಿದ್ಯಾರ್ಥಿಗಳ ಅರ್ಜಿಯನ್ನು **UUCMS Portal** ನಲ್ಲಿ ನೋಂದಾಯಿಸಿ, ಶುಲ್ಕವನ್ನು ಆನ್-ಲೈನ್‌ನಲ್ಲಿಯೇ **UUCMS Portal** ಮೂಲಕ ಪಾವತಿಸತಕ್ಕದ್ದು.
3. ಸವಿವರವಾದ ವೇಳಾಪಟ್ಟಿಯನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು.
4. ***ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಸದ್ರಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಶುಲ್ಕ ಪಾವತಿಸಿದ ರಶೀದಿ/ಚಲನ್‌ನನ್ನು ಪ್ರತ್ಯೇಕವಾಗಿ ಎಲ್ಲಾ ವಿವರಗಳನ್ನೊಳಗೊಂಡ ಮಾಹಿತಿಯೊಂದಿಗೆ ಸಲ್ಲಿಸತಕ್ಕದ್ದು.***
5. ***ಕುಲಸಚಿವರಿಂದ ಪ್ರವೇಶಾತಿ ಅನುಮೋದನೆಯಾಗದ / ಕಡಿಮೆ ಹಾಜರಾತಿ ಇರುವ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ.*** **ಪ್ರವೇಶಾವಕಾಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾನಿಲಯದಿಂದ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟ ಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ವಿಭಾಗ / ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯೂ, ವಿಭಾಗ / ಕಾಲೇಜು ಅಥವಾ ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಅಲ್ಲದೆ ಆಯಾ ಕೋರ್ಸಿನ ನಿಯಮದ ಪ್ರಕಾರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸುವಂತಿಲ್ಲ.**
6. ಇನ್ನಿತರ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿರುವುದರಿಂದ (ವಿಭಾಗ / ಕಾಲೇಜು ಮತ್ತು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ) ವಿಭಾಗ / ಕಾಲೇಜುಗಳಲ್ಲಿ ಹಾಜರಿಲ್ಲದ ವಿದ್ಯಾರ್ಥಿಗಳು ಕೂಡಾ ನಿಗದಿತ ಶುಲ್ಕದೊಂದಿಗೆ ಆನ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿಯನ್ನು (ಇತರ ವಿದ್ಯಾರ್ಥಿಗಳೊಂದಿಗೆ) ಸಲ್ಲಿಸುವಂತೆ ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು/ಕಾಲೇಜುಗಳ ಪ್ರಾಂಶುಪಾಲರುಗಳು ನಿಗಾವಹಿಸತಕ್ಕದ್ದು.

7. *ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳ ಪರೀಕ್ಷಾ ಹಣಕಾಸು ತಖ್ತೆ ಹಾಗೂ ಪರೀಕ್ಷಾರ್ಥಿಗಳ ಪಟ್ಟಿಯನ್ನು ಅನುಮೋದಿಸಲ್ಪಟ್ಟ ಪ್ರವೇಶಾನುಮೋದನೆ ಪಟ್ಟಿಯಲ್ಲಿ ಸೂಚಿಸಿರುವ ಮಾದರಿಯಲ್ಲಿ ಯಾವುದೇ ಕಾಗುಣಿತ ವ್ಯತ್ಯಾಸವಿಲ್ಲದಂತೆ ದಾಖಲಿಸಬೇಕು.*

8. *ವಿಶ್ವವಿದ್ಯಾನಿಲಯದ ವಿನಿಯಮಾವಳಿ (ರೆಗ್ಯುಲೇಶನ್) ಪ್ರಕಾರ ಪರೀಕ್ಷೆಗೆ ಹಾಜರಾಗಲು ಅರ್ಹತೆಯನ್ನು ಹೊಂದಿದ ವಿದ್ಯಾರ್ಥಿಗಳಿಗೆ ಮಾತ್ರ ಆನ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿಯನ್ನು ಸಲ್ಲಿಸಲು ಅನುಮತಿಯನ್ನು ನೀಡಲಾಗಿದೆ. **ವಿಶ್ವವಿದ್ಯಾನಿಲಯದ ತಿದ್ದುಪಡಿ ವಿನಿಯಮದ ಪ್ರಕಾರ 2021 ಹಾಗೂ ಅದರ ಹಿಂದಿನ ಸಾಲಿನ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ವಿಶೇಷ ಪರೀಕ್ಷಾ ಶುಲ್ಕ ವರ್ಷಕ್ಕೆ ರೂ.1000/- ಪಾವತಿಸಿ, ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾಗಿರುತ್ತಾರೆ***. ಸದ್ರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು. ಇಲ್ಲವಾದಲ್ಲಿ ವಿಭಾಗದ ಮುಖ್ಯಸ್ಥರು/ ಕಾಲೇಜಿನ ಪ್ರಾಂಶುಪಾಲರು ಜವಾಬ್ದಾರರಾಗುವರು.

9. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು (ದಂಡಶುಲ್ಕ ರಹಿತ ಮತ್ತು ದಂಡಶುಲ್ಕ ಸಹಿತ) ಪಾವತಿ ಮಾಡಲು ಈ ಕೆಳಕಂಡ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

**ಪರೀಕ್ಷಾ ಶುಲ್ಕವನ್ನು ಪಾವತಿಸಲು ನಿಗದಿಪಡಿಸಲಾದ ಅಂತಿಮ ದಿನಾಂಕ:**

**ದಂಡ ಶುಲ್ಕ ರಹಿತ**: (ನಿಯಮಿತ ಹಾಗೂ ಪುನರಾವರ್ತಿತ)
ದ್ವಿತೀಯ/ಚತುರ್ಥ ಸೆಮಿಸ್ಟರ್
ಹಾಗೂ ಪ್ರಥಮ/ದ್ವಿತೀಯ ವರ್ಷ ಎಂ.ಎ. ತುಳು } 09.06.2025

**ದಂಡ ಶುಲ್ಕದೊಂದಿಗೆ** : (ದಿನವೊಂದಕ್ಕೆ ರೂ. 300/-ರಂತೆ) (ನಿಯಮಿತ ಹಾಗೂ ಪುನರಾವರ್ತಿತ)
ದ್ವಿತೀಯ/ಚತುರ್ಥ ಸೆಮಿಸ್ಟರ್ ಹಾಗೂ
ಪ್ರಥಮ/ದ್ವಿತೀಯ ವರ್ಷ ಎಂ.ಎ. ತುಳು } 10.06.2025ರಿಂದ 15.06.2025ರವರೆಗೆ

10. ಒಮ್ಮೆ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗಳಿಗೆ ಸರಿದೂಗಿಸಿಕೊಳ್ಳಲಾಗುವುದಿಲ್ಲ.

11. ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ದರಗಳು :

| **ಕ್ರಮ ಸಂಖ್ಯೆ** | **ಪ್ರೋಗ್ರಾಂ** | **ಶುಲ್ಕ** | |
|---|---|---|---|
| | | **ಪ್ರತಿಯೊಂದು ಸೆಮಿಸ್ಟರ್/ ವಾರ್ಷಿಕ ಪೂರ್ಣ ಪರೀಕ್ಷೆಗೆ** | **ವಿಷಯವೊಂದಕ್ಕೆ** |
| **ಕಲಾ ನಿಕಾಯ** | | | |
| 1. | **ಎಂ.ಎ.:** ಇಂಗ್ಲೀಷ್, ಕನ್ನಡ, ಸಂಸ್ಕೃತ, ಹಿಂದಿ, ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಕೊಂಕಣಿ, ಕೊಡವ, ಇತಿಹಾಸ ಮತ್ತು ಪುರಾತತ್ವಶಾಸ್ತ್ರ. *ದ್ವಿತೀಯ ಸೆಮಿಸ್ಟರ್ ಮತ್ತು ಚತುರ್ಥ ಸೆಮಿಸ್ಟರ್* | ರೂ. 1,200.00 | ರೂ. 600.00 |
| 2. | **ಎಂ.ಎ.:** ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಹಾಗೂ ಎಂ.ಎಸ್.ಡಬ್ಲ್ಯು. *ದ್ವಿತೀಯ ಸೆಮಿಸ್ಟರ್ ಮತ್ತು ಚತುರ್ಥ ಸೆಮಿಸ್ಟರ್* | ರೂ. 1,800.00 | |
| 3. | *ಪ್ರಥಮ/ದ್ವಿತೀಯ ವರ್ಷ* ಎಂ.ಎ. ತುಳು | ರೂ. 1,200.00 | |
| **ವಾಣಿಜ್ಯ ನಿಕಾಯ** | | | |
| 1. | ಎಂ.ಕಾಂ., ಎಂ.ಕಾಂ.(ಹೆಚ್.ಆರ್.ಡಿ.), ಎಂ.ಕಾಂ.(ಇನ್ಶೂರೆನ್ಸ್ ಆ್ಯಂಡ್ ಬ್ಯಾಂಕ್ ಮ್ಯಾನೇಜ್‌ಮೆಂಟ್), *ದ್ವಿತೀಯ ಸೆಮಿಸ್ಟರ್ ಮತ್ತು ಚತುರ್ಥ ಸೆಮಿಸ್ಟರ್* : | ರೂ.1,200.00/- | ರೂ.600.00 |
| 2. | ಎಂ.ಬಿ.ಎ.(ಐ.ಬಿ.), ಎಂ.ಕಾಂ.(ಐ.ಬಿ.) *ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್:* | ರೂ.2,200.00/- | |
| 3. | ಎಂ.ಬಿ.ಎ.(ಟಿ.ಟಿ.ಎಂ.), *ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್:* | ರೂ.1,800.00/- | |

| | | | |
|---|---|---|---|
| **ವಿಜ್ಞಾನ ನಿಕಾಯ** | | | |
| 1. | ಎಂ.ಎಸ್ಸಿ.: ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಜೀವವಿಜ್ಞಾನ, ರಸಾಯನಶಾಸ್ತ್ರ, ಅನ್ವಯಿಕ ರಸಾಯನಶಾಸ್ತ್ರ, ಸಾವಯವ ರಸಾಯನಶಾಸ್ತ್ರ, ಭೌತಶಾಸ್ತ್ರ, ಸಂಖ್ಯಾಶಾಸ್ತ್ರ, ವಸ್ತು ವಿಜ್ಞಾನ, ಯೋಗ ವಿಜ್ಞಾನ, ಜೀವರಸಾಯನಶಾಸ್ತ್ರ, ಸೂಕ್ಷ್ಮಾಣು ಜೀವವಿಜ್ಞಾನ, ಮನಃಶಾಸ್ತ್ರ, ಜಿಯೋಗ್ರಾಫಿ, ಪರಿಸರ ವಿಜ್ಞಾನ ಎಂ.ಎಲ್.ಐ.ಎಸ್ಸಿ.<br>*ದ್ವಿತೀಯ ಸೆಮಿಸ್ಟರ್ ಮತ್ತು ಚತುರ್ಥ ಸೆಮಿಸ್ಟರ್ :* | ರೂ. 1,800.00 | ರೂ. 600.00 |
| 2. | ಎಂ.ಎಸ್ಸಿ.: ಮೆಡಿಕಲ್ ಫಿಸಿಕ್ಸ್, ಸಾಗರ ಭೂವಿಜ್ಞಾನ, ಇಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸಾಯನ್ಸ್, ಸೈಬರ್ ಸೆಕ್ಯುರಿಟಿ, ಕೈಗಾರಿಕಾ ರಸಾಯನ ಶಾಸ್ತ್ರ, ಅನಾಲಿಟಿಕಲ್ ಕೆಮಿಸ್ಟ್ರಿ,<br>*ದ್ವಿತೀಯ ಸೆಮಿಸ್ಟರ್*<br>*ಚತುರ್ಥ ಸೆಮಿಸ್ಟರ್* | ರೂ. 1,800.00<br>ರೂ. 2,700.00 | ರೂ. 600.00 |
| 3. | ಎಂ.ಎಸ್ಸಿ.: ಜೀಯೋಇನ್‌ಫಾರ್ಮೆಟಿಕ್ಸ್<br>*ದ್ವಿತೀಯ ಸೆಮಿಸ್ಟರ್*<br>*ಚತುರ್ಥ ಸೆಮಿಸ್ಟರ್* | ರೂ. 2,200.00<br>ರೂ. 2,700.00 | ರೂ.700.00 |
| 4. | ಎಂ.ಎಸ್ಸಿ.: ಬಯೋಟೆಕ್ನಾಲಜಿ<br>*ದ್ವಿತೀಯ ಸೆಮಿಸ್ಟರ್ ಮತ್ತು ಚತುರ್ಥ ಸೆಮಿಸ್ಟರ್:* | ರೂ. 2,400.00 | ರೂ.700.00 |
| 5. | ಎಂ.ಎಸ್ಸಿ.: ಎಂ.ಎಸ್ಸಿ. ಫುಡ್ ಸೈನ್ಸ್ & ನ್ಯೂಟ್ರಿಷನ್<br>*ದ್ವಿತೀಯ ಸೆಮಿಸ್ಟರ್ ಮತ್ತು ಚತುರ್ಥ ಸೆಮಿಸ್ಟರ್:* | ರೂ. 2,860.00 | ರೂ.700.00 |
| 6. | ಎಂ.ಎಸ್ಸಿ.: ಗಣಿತಶಾಸ್ತ್ರ<br>*ದ್ವಿತೀಯ ಸೆಮಿಸ್ಟರ್*<br>*ಚತುರ್ಥ ಸೆಮಿಸ್ಟರ್* | ರೂ. 1,800.00<br>ರೂ. 1,200.00 | ರೂ.600.00 |
| 7. | ಎಂ.ಎಸ್ಸಿ. ಆಡಿಯೋಲಜಿ, ಸ್ಪೀಚ್ ಲ್ಯಾಂಗ್ವೇಜ್ ಪೆಥಾಲಜಿ, ಎಂ.ಎ.ಎಸ್.ಎಲ್.ಪಿ.<br>*ದ್ವಿತೀಯ ಸೆಮಿಸ್ಟರ್*<br>*ಚತುರ್ಥ ಸೆಮಿಸ್ಟರ್* | ರೂ. 2,860.00<br>ರೂ. 5,000.00 | ರೂ.700.00 |
| **ಶಿಕ್ಷಣ ನಿಕಾಯ** | | | |
| 1. | ಎಂ.ಪಿ.ಎಡ್.<br>*ದ್ವಿತೀಯ ಸೆಮಿಸ್ಟರ್ ಮತ್ತು ಚತುರ್ಥ ಸೆಮಿಸ್ಟರ್:* | ರೂ. 1,800.00 | ರೂ. 600.00 |
| **ನಿಗದಿಪಡಿಸಿದ ಪರೀಕ್ಷಾ ಶುಲ್ಕದ ಜೊತೆಗೆ ಪ್ರತೀ ಪರೀಕ್ಷೆಗೆ ರೂ.750.00 ಪರೀಕ್ಷಾ ಫಲಿತಾಂಶ ಪ್ರೊಸೆಸಿಂಗ್ ಶುಲ್ಕ ಮತ್ತು ರೂ. 200.00 ಆನ್‌ಲೈನ್ ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕಗಳನ್ನು ಪಾವತಿಸತಕ್ಕದ್ದು.** | | | |

* ವಿದ್ಯಾರ್ಥಿಗಳು ಪರೀಕ್ಷೆಯ ಯಾವುದಾದರೂ ಭಾಗ/ಭಾಗಗಳಿಗೆ ಪಾವತಿಸಲಿರುವ ಒಟ್ಟು ಪರೀಕ್ಷಾ ಶುಲ್ಕವು ನಿಗದಿತ ಪೂರ್ಣ ಪರೀಕ್ಷಾ ಶುಲ್ಕವನ್ನು ಮೀರಬಾರದು.

12. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಲ್ಲಿ ವಾರ್ಷಿಕ ಆದಾಯ ರೂ. 2.5 ಲಕ್ಷಕ್ಕಿಂತ ಕಡಿಮೆ ಇರುವ ವಿದ್ಯಾರ್ಥಿಗಳು ರೂ. 950/-( ಅರ್ಜಿ ಶುಲ್ಕ ಮತ್ತು ಫಲಿತಾಂಶ ಪ್ರೊಸೆಸ್ಸಿಂಗ್ ಶುಲ್ಕ)ವನ್ನು ಮಾತ್ರ UUCMS ನಲ್ಲಿ ಪಾವತಿಸುವುದು. ಸದರಿ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಸರ್ಕಾರದಿಂದ ಮಂಜೂರಾಗುವ ಶಿಷ್ಯ ವೇತನದಿಂದ ಮಂಗಳೂರು ವಿಶ್ವವಿದ್ಯಾನಿಲಯದ ನಿಧಿಗೆ ಪಾವತಿಸುವುದು.

**ಶಿಷ್ಯವೇತನಕ್ಕೆ ಅರ್ಹರಲ್ಲದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸತಕ್ಕದು.**

ಈ ಮೇಲಿನ ಅಂಶಗಳಿಗೆ ಸಂಬಂಧಿಸಿದಂತೆ ಆಯಾಯ ವಿಭಾಗದ ಅಧ್ಯಕ್ಷರು/ ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳ ಆದಾಯ ದೃಢೀಕರಣ ಪತ್ರವನ್ನು ಪರಿಶೀಲಿಸಿ, ಅದರಂತೆ ಸದರಿ ವಿದ್ಯಾರ್ಥಿಗಳು ಶುಲ್ಕ ಪಾವತಿಸಿರುವ ಬಗ್ಗೆ ದೃಢೀಕರಿಸಿ ವಿವರವನ್ನು ದಿನಾಂಕ: 18.06.2025ರ ಒಳಗೆ ಈ ಕಚೇರಿಗೆ ಕಳುಹಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಇ) ಪುನರಾವರ್ತಿತ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿ ಪಡೆಯಲು ಅರ್ಹರಾಗಿರುವುದಿಲ್ಲ. ಆದರೆ ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳೂ ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳು ರೂ. 750.00 ಪರೀಕ್ಷಾ ಫಲಿತಾಂಶ ಶುಲ್ಕ ಮತ್ತು ರೂ. 200.00 ಆನ್‌ಲೈನ್ ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕವನ್ನು ಪಾವತಿಸತಕ್ಕದ್ದು.

12. ಪುನರಾವರ್ತಿತ ವಿದ್ಯಾರ್ಥಿಗಳಿಂದ ಪಡೆದ ಶುಲ್ಕವನ್ನು ಈ ಕೆಳಗಿನ ಕೋಡ್ ಸಂಖ್ಯೆಗಳಲ್ಲಿ ಬ್ಯಾಂಕ್ ಚಲನ್ ಮುಖಾಂತರ ಮಂಗಳೂರು ವಿಶ್ವವಿದ್ಯಾನಿಲಯ ನಿಧಿಗೆ ಪಾವತಿಸತಕ್ಕದ್ದು.

ಅ) ಅರ್ಜಿ ಶುಲ್ಕ ... 008/14

ಆ) ಪರೀಕ್ಷಾ ಶುಲ್ಕ ... 008/23

ಇ) ಅಂಕಪಟ್ಟಿ ಶುಲ್ಕ ... 008/24

13. **ಕೆಳಗೆ ನಮೂದಿಸಿರುವ ತಖ್ತೆಗಳನ್ನು ಮತ್ತು ದಾಖಲೆ ಪತ್ರಗಳನ್ನು ಈ ಕಛೇರಿಗೆ ದಿನಾಂಕ: *18.06.2025*ರ ಒಳಗಾಗಿ ತಪ್ಪದೇ ಕಳುಹಿಸಿಕೊಡುವುದು.**

ಅ) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿ.

ಆ) ಪುನರಾವರ್ತಿತ ವಿದ್ಯಾರ್ಥಿಗಳ (MU VARSITY) ಕ್ರೋಢೀಕೃತ ಪರೀಕ್ಷಾ ಶುಲ್ಕವನ್ನು ಪಾವತಿಸಿದ ಚಲನ್ ಅಥವಾ ಡಿ.ಡಿ.

ಇ) ಹಣಕಾಸು ತ:ಖ್ತೆ - ಆನ್‌ಲೈನ್ ಪ್ರಿಂಟ್

14. **ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಿ, ಅಂತಿಮ ಆನ್‌ಲೈನ್ ಪ್ರಿಂಟಿಂಗ್ ಪ್ರತಿಯನ್ನು ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ 8 ದಿನಗಳ ಮುಂಚಿತವಾಗಿ ಈ ಕಛೇರಿಗೆ ತಪ್ಪದೆ ಸಲ್ಲಿಸಲು ತಿಳಿಸಲಾಗಿದೆ.**

15. ಪ್ರಶ್ನೆಪತ್ರಿಕೆಗಳ ಕೋರಿಕೆಪಟ್ಟಿ (Indent) ಯನ್ನು ಈ ಕೆಳಗಿನ ಲಿಂಕ್‌ನ ಮೂಲಕ ದಿನಾಂಕ: 16.06.2025 ರ ನಂತರ ಭರ್ತಿ ಮಾಡಿ ವಿಶ್ವವಿದ್ಯಾನಿಲಯಕ್ಕೆ ದಿನಾಂಕ: 18.06.2025 ರ ಒಳಗಾಗಿ ಕಳುಹಿಸತಕ್ಕದ್ದು. http://results1.mangaloreuniversity.in.8003/Home.aspx

ಕುಲಸಚಿವರು (ಪರೀಕ್ಷಾಂಗ)

ಗೆ: ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ಕೋರ್ಸ್‌ನ್ನು ಹೊಂದಿರುವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ, ಸೂಚನಾಫಲಕದಲ್ಲಿ ಪ್ರಕಟಿಸುವಂತೆ ತಿಳಿಸಲಾಗಿದೆ.

ಪ್ರತಿ:

1. ಡೀನರು, ಕಲೆ, ವಾಣಿಜ್ಯ, ವಿಜ್ಞಾನ ಮತ್ತು ಶಿಕ್ಷಣ ನಿಕಾಯಗಳು, ಮಂಗಳೂರು ವಿಶ್ವವಿದ್ಯಾನಿಲಯ.
2. ಕುಲಸಚಿವರು (ಮೌಲ್ಯಮಾಪನ) ಬೆಂಗಳೂರು / ಕರ್ನಾಟಕ / ಮೈಸೂರು / ಗುಲ್ಬರ್ಗಾ / ಕುವೆಂಪು ವಿಶ್ವವಿದ್ಯಾನಿಲಯ.
3. ಕುಲಸಚಿವರು/ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
4. ಪ್ರೊ.ಎ.ಎಂ ಖಾನ್, ಸಂಯೋಜಕರು, UUCMS Portal, ಇಲೆಕ್ಟ್ರಾನಿಕ್ಸ್ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
5. ಕುಲಪತಿಯವರ ಆಪ್ತ ಕಾರ್ಯದರ್ಶಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
6. ವಿಶೇಷಾಧಿಕಾರಿ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಘಟಕ, ಮಂಗಳೂರು ವಿಶ್ವವಿದ್ಯಾನಿಲಯ
7. ಉಪಕುಲಸಚಿವರು, ಕುಲಸಚಿವರು (ಪರೀಕ್ಷಾಂಗ)ರ ಕಛೇರಿ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
8. ನೋಡಲ್ ಅಧಿಕಾರಿ, UUCMS Portal, ಗಣಕ ಯಂತ್ರ ವಿಭಾಗ, ಕುಲಸಚಿವರು (ಪರೀಕ್ಷಾಂಗ)ರ ಕಚೇರಿ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
9. ಸಹಾಯಕ ಕುಲಸಚಿವರು (ಪರೀಕ್ಷಾಂಗ) 1 & 2, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
10. ಎಲ್ಲಾ ಅಧೀಕ್ಷಕರು, ಪರೀಕ್ಷಾಂಗ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
11. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ವಿಶ್ವವಿದ್ಯಾನಿಲಯ, ಕಾಲೇಜು ಆವರಣ, ಮಂಗಳೂರು 1.
12. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಜಿಲ್ಲಾಧಿಕಾರಿ ಆಫೀಸಿನ ಬಳಿ, ಮಂಗಳೂರು.
13. ಆಪ್ತ ಸಹಾಯಕರು, ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
14. ಇ.9/ಇ.11 ವಿಷಯ ನಿರ್ವಾಹಕರು/ಕಂಪ್ಯೂಟರ್ ವಿಭಾಗಕ್ಕೆ ಮಾಹಿತಿಗಾಗಿ